# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 1525/2022

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ದುರ್ಗಪ್ಪ ತಂದೆ ಮಾರುತಿ ಹೆಳವರ,
ವಯಸ್ಸು : 23 ವರ್ಷ, ವೃತ್ತಿ : ಗೌಂಡಿ ಕೆಲಸ,
ಸಾಃ ಹೊಸ ಹಗಡಲಿ, ತಾಃ ಹಳಿಯಾಳ, ಜಿಃಉ.ಕ.

2. ಸಮೀರವುಲ್ಲಾ ಅಲಿಯಾಸ ಸಮೀರ ತಂದೆ ಸೂಹೆಲ ಅಹ್ಮದ ಬೇಪಾರಿ,
ವಯಸ್ಸು : 22 ವರ್ಷ, ವೃತ್ತಿ : ಕೂಲಿ ಕೆಲಸ,
ಸಾಃ ಚವ್ವಾಣ ಪ್ಲಾಟ್, ಹಳಿಯಾಳ, ಹಳಿಯಾಳ ಶಹರ,
ತಾಃ ಹಳಿಯಾಳ, ಜಿಃಉ.ಕ.

3. ಜುಬೇರಖಾನ ತಂದೆ ಆಲಂಖಾನ್ ಪಠಾಣ,
ವಯಸ್ಸು : 25 ವರ್ಷ, ವೃತ್ತಿ : ಚಾಲಕ ಕೆಲಸ,
ಸಾಃ ಅಕ್ಕಿ ಪೇಟೆ ಸಿದ್ದಾರೋಢ, ಹಳೇ ಹುಬ್ಬಳ್ಳಿ,
ತಾಃ ಹುಬ್ಬಳ್ಳಿ, ಜಿಃ ಧಾರವಾಡ.

4. ಕಿಶನ್ ತಂದೆ ಅನುರಾಜ ಗೊಂದಳಿ,
ವಯಸ್ಸು : 29 ವರ್ಷ, ವೃತ್ತಿ : ಚಾಲಕ ಕೆಲಸ,
ಸಾಃ ಅಕ್ಕಿ ಪೇಟೆ ಸಿದ್ದಾರೋಢ, ಹಳೇ ಹುಬ್ಬಳ್ಳಿ,
ತಾಃ ಚವ್ವಾಣ್ ಪ್ಲಾಟ್, ಹಳಿಯಾಳ ಶಹರ, ತಾಃ ಹಳಿಯಾಳ,
ಜಿಃ ಉ.ಕ.

## <u>ದೋಷಾರೋಪಣೆ</u>

ನಾನು ಗೀತಾ., ಪ್ರ.ದ.ನ್ಯಾದಂ ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷರೋಪಣೆ ಏನೆಂದರೆ.

1, 2 ಮತ್ತು 4 ನೇ ಆರೋಪಿತರಾದ ನೀವು ದಿನಾಂಕ 27–05–2022 ರಂದು ರಾತ್ರಿ 11–30 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ಮುಗದಕೊಪ್ಪ ಗ್ರಾಮದಲ್ಲಿ ಚಾಸಾ 1 ರವರು ತಮ್ಮ ಮನೆಯ ಮುಂದೆ ನಿಲ್ಲಿಸಿದ ಎಚ್ ಎಫ್ ಡಿಲಕ್ಸ್ ಬೈಕ ನಂಬರ ಕೆಎ–25–ಇಯು–9998 ನೇದ್ದನ್ನು ನಿಮ್ಮ ಪೈಕಿ 1, 2 ಮತ್ತು 4 ನೇ ಆರೋಪಿತರಾದ ನೀವು ಪಿರ್ಯಾದಿಯ ಎಚ್ ಎಫ್ ಡಿಲಕ್ಸ್ ಬೈಕ ಅನ್ನು ಕಳುವು ಮಾಡುವ ಮೂಲಕ ನೀವು 1, 2 ಮತ್ತು 4 ನೇ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 379 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ 1, 2 ಮತ್ತು 4 ನೇ ಆರೋಪಿತರು ಎಚ್ ಎಫ್ ಡಿಲಕ್ಸ್ ಬೈಕ ನಂಬರ ಕೆಎ–25–ಇಯು–9998 ನೇದ್ದನ್ನು ಕಳುವು ಮಾಡಿದ್ದಾರೆ ಎಂದು ಗೊತ್ತಿದ್ದರೂ ಆರೋಪಿ 3 ರವರು ಆದ ನೀವು ಅದನ್ನು ಸ್ವೀಕರಿಸಿಕೊಂಡು ಸಾಕ್ಷಿಯನ್ನು ಹಾಳು ಮಾಡುವ ಉದ್ದೇಶದಿಂದ ಅದರ ಬಿಡಿ ಭಾಗಗಳನ್ನು ಬಿಚ್ಚಿ ಬರ ಹೋಗುವ ವ್ಯಾಪಾರಿಗಳಿಗೆ ಮಾರಾಟ ಮಾಡಿ ಹಾಗೂ ಅಪರಾಧದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸಾಕ್ಷ್ಯ ನಾಶಪಡಿಸುವ ಮೂಲಕ ನೀವು 1, 2 ಮತ್ತು 4 ನೇ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 201 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಕೊನೆಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ 1, 2 ಮತ್ತು 4 ನೇ ಆರೋಪಿತರಾದ ನೀವು ಪಿರ್ಯಾದಿಯ ಎಚ್ ಎಫ್ ಡಿಲಕ್ಸ್ ಬೈಕ ನಂಬರ ಕೆಎ–25–ಇಯು–9998 ನೇದ್ದನ್ನು ಕಳುವು ಮಾಡಿ, 3 ನೇ ಆರೋಪಿಗೆ ಮಾರಾಟ ಮಾಡಿ, ಅದು ಕಳುವು ಮಾಡಿದ ವಾಹನ ಎಂದು ಗೊತ್ತಿದ್ದರೂ ಸಹ 3 ನೇ ಆರೋಪಿಯಾದ ನೀವು ಅಪ್ರಮಾಣಿಕವಾಗಿ ಸ್ವೀಕರಿಸುವ ಮೂಲಕ ಭಾ.ದಂ.ಸಂ. ಕಲಂ 411 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಆರೋಪಿ ಕ್ರ.1
ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೊಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.2

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.3

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.4

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

(ದೊಷಾರೋಪಣೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳ : ಹಳಿಯಾಳ.

ದಿನಾಂಕ : 08-01-2026. ಪ್ರ.ದ.ನ್ಯಾದಂ., ಹಳಿಯಾಳ.